ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 5 ಬಿಯುಡಿ 13

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ: 1-7-2013.

**ಸುತ್ತೋಲೆ** **'ಅತ್ಯಂತ ತುರ್ತು'**

**ವಿಷಯ:** 2014-15ನೇ ಸಾಲಿನ ಆಯವ್ಯಯ ಅಂದಾಜುಗಳು ಅನುಸೂಚಿ-ಬಿ ವೇತನ ಮತ್ತು ಇತರೆ ಭತ್ಯೆಗಳ ಅಂದಾಜುಗಳನ್ನು ಸಿದ್ಧಪಡಿಸುವ ಕುರಿತು.

-0-

2014-15ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ತಯಾರಿಸುವುದಕ್ಕೆ ಸಂಬಂಧಪಟ್ಟಂತೆ ವೇತನಗಳು ಎಂಬ ನಿಗಧಿತ ವೆಚ್ಚಗಳಿಗೆ ಸಂಬಂಧಿಸಿದ ವಿವರಗಳನ್ನು ಒಳಗೊಂಡಂತೆ ***ಅನುಸೂಚಿ-ಬಿ*** ಅಂದಾಜುಗಳನ್ನು ಸಂಕಲಿಸಿ ನಿಗದಿಗೊಳಿಸಿರುವ ದಿನಾಂಕದೊಳಗೆ ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ. ಆದುದರಿಂದ, ಈ ವಿಷಯವನ್ನು **ಅತ್ಯಂತ ತುರ್ತು** ಎಂದು ಪರಿಗಣಿಸಿ ಈ ಕೆಲಸಕ್ಕೆ ಮೊದಲ ಆದ್ಯತೆಯನ್ನು ನೀಡಿ ಯಾವುದೇ ಕಾರಣಕ್ಕೂ ತಡಮಾಡದೇ **ದಿನಾಂಕ:15-8-2013 ರೊಳಗೆ** ನಿರ್ದೇಶನಾಲಯವನ್ನು ತಲುಪುವಂತೆ ಅಂದಾಜುಗಳನ್ನು **ಯೋಜನೆ ಮತ್ತು ಯೋಜನೇತರ ಪ್ರತ್ಯೇಕವಾಗಿ** ತಯಾರಿಸಿ ಕಳುಹಿಸಿ ಕೊಡಬೇಕಾಗಿ ಈ ಮೂಲಕ ಎಲ್ಲಾ ವಿದ್ಯಾಸಂಸ್ಥೆಗಳ ಮುಖ್ಯಸ್ಥರಿಗೆ ತಿಳಿಸಲಾಗಿದೆ. ಅಂದಾಜುಗಳನ್ನು ನಿಗಧಿತ ಸಮಯದಲ್ಲಿ ಕಳುಹಿಸದೇ ಇರುವ ಪ್ರಿನ್ಸಿಪಾಲರು / ಸಂಸ್ಥೆಯ ಮುಖ್ಯಸ್ಥರುಗಳನ್ನು ವಿಳಂಬಕ್ಕೆ ನೇರ ಜವಾಬ್ದಾರರನ್ನಾಗಿ ಮಾಡಲಾಗುವುದು ಹಾಗೂ ಈ ಸಂಬಂಧದಲ್ಲಿ ಸರ್ಕಾರವು ತೆಗೆದುಕೊಳ್ಳಬಹುದಾದ ಶಿಸ್ತಿನ ಕ್ರಮವನ್ನು ಎದುರಿಸಬೇಕಾಗಲಿದ್ದು, ಯಾವುದೇ ಕಾರಣಕ್ಕೂ ***ವಿಳಂಬ ಮಾಡಬಾರದೆಂದು*** ಮತ್ತೊಮ್ಮೆ ಸೂಚಿಸಲಾಗಿದೆ. ಅಂದಾಜುಗಳನ್ನು ಇ-ಅಂಚೆ ವಿಳಾಸ 'budgetdte@gmail.com" ಗೆ ಎಂಎಸ್ ಆಫೀಸ್ ಎಕ್ಸೆಲ್ ತಂತ್ರಾಂಶ ಬಳಸಿ ಕನ್ನಡ ನುಡಿಯಲ್ಲಿ ಸಲ್ಲಿಸಬಹುದಾಗಿರುತ್ತದೆ.

***ಅನುಸೂಚಿ-ಬಿ*** ಅಂದಾಜುಗಳನ್ನು ಇದರೊಂದಿಗೆ ಲಗತ್ತಿಸಿರುವ ಅನುಬಂಧ-2ರ ನಮೂನೆಯಲ್ಲಿ ಮಾತ್ರ **ಎ3 ಅಳತೆಯ ಹಾಳೆಯಲ್ಲಿ** ಈ ಕೆಳಕಂಡ ಪ್ರತ್ಯೇಕ ಗುಂಪುಗಳಲ್ಲಿ ಸಿದ್ಧಪಡಿಸಿ ಕಳುಹಿಸಲು ತಿಳಿಸಲಾಗಿದೆ.2013-14ನೇ ಸಾಲಿನಲ್ಲಿ ಸಂಸ್ಥೆಗೆ ಮಂಜೂರಾಗಿರುವ ಹೊಸ ಹುದ್ದೆಗಳ ಅಥವಾ ರದ್ದಾಗಿರುವ ಹುದ್ದೆಗಳ ಬಗ್ಗೆ ವಿವರಗಳನ್ನು ಪ್ರತ್ಯೇಕವಾಗಿ ವಿವರಣಾ ಪಟ್ಟಿಯಲ್ಲಿ ಸಿದ್ಧಪಡಿಸಿ ಸಲ್ಲಿಸಲು ಹಾಗೂ ಸಂಬಂಧಪಟ್ಟ ಸರ್ಕಾರಿ ಆದೇಶದ ಪ್ರತಿಗಳನ್ನು ಲಗತ್ತಿಸಲು ತಿಳಿಸಲಾಗಿದೆ.

1. **ಯೋಜನೇತರ ಹುದ್ದೆಗಳು:**

| | | |
|---|---|---|
| ಅ) ಪತ್ರಾಂಕಿತ ಅಧಿಕಾರಿಗಳು | : | ಖಾಯಂ ಹುದ್ದೆಗಳು |
| ಆ) ಪತ್ರಾಂಕಿತ ಅಧಿಕಾರಿಗಳು | : | ತಾತ್ಕಾಲಿಕ ಹುದ್ದೆಗಳು |
| ಇ) ಪತ್ರಾಂಕಿತವಲ್ಲದ ಸಿಬ್ಬಂದಿ ವರ್ಗ | : | ಖಾಯಂ ಹುದ್ದೆಗಳು |
| ಈ) ಪತ್ರಾಂಕಿತವಲ್ಲದ ಸಿಬ್ಬಂದಿ ವರ್ಗ | : | ತಾತ್ಕಾಲಿಕ ಹುದ್ದೆಗಳು |

**2. ಕಮಿಟೆಡ್ ಹುದ್ದೆಗಳು:**

ಎಂಟನೇ ಯೋಜನೆಯಲ್ಲಿ ಸೃಜಿಸಲ್ಪಟ್ಟಿದ್ದ ಹುದ್ದೆಗಳು ಒಂಭತ್ತನೇ ಯೋಜನೆಯ ಅವಧಿಯಲ್ಲಿ ಹಾಗೂ ಒಂಭತ್ತನೆಯ ಯೋಜನೆಯ ಅವಧಿಯಲ್ಲಿ ಸೃಜಿಸಲ್ಪಟ್ಟು ಹತ್ತನೇ ಯೋಜನೆ ಅವಧಿಯಲ್ಲಿ ಯೋಜನೇತರ ಹುದ್ದೆಗಳಾಗಿ ಪರಿವರ್ತಿಸಲ್ಪಟ್ಟ ಹುದ್ದೆಗಳು ಮಾತ್ರ.

**3. ಯೋಜನೆ ಹುದ್ದೆಗಳು:**

ಅ) ಪತ್ರಾಂಕಿತ ಹುದ್ದೆಗಳು

ಆ) ಪತ್ರಾಂಕಿತವಲ್ಲದ ಹುದ್ದೆಗಳು

**4. ನಿವೃತ್ತಿಯಾಗುವರ ವಿವರ:**

ದಿನಾಂಕ 1-4-14 ರಿಂದ 31-3-15 ರ ಅವಧಿಯಲ್ಲಿ ನಿವೃತ್ತಾರುಗುವ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರ ವಿವರಗಳನ್ನು ಲಗತ್ತಿಸಿರುವ ನಮೂನೆಯಲ್ಲಿ ಸಲ್ಲಿಸುವುದು.

ಮೇಲ್ಕಂಡ ಕ್ರಮ ಸಂಖ್ಯೆ (1) ರಿಂದ (4)ರ ವರೆಗಿನ ಮಾಹಿತಿಗಳನ್ನು ಪ್ರತ್ಯೇಕವಾಗಿ ಸಿದ್ಧಪಡಿಸಿ ನಿಗಧಿತ ಸಮಯದೊಳಗೆ ಲಗತ್ತಿಸಲಾಗಿರುವ ನಮೂನೆಗಳಲ್ಲಿ ~~ಕೋರಿರುವ ಮಾಹಿತಿಯನ್ನು~~ ಸಲ್ಲಿಸುವಂತೆಯೂ ಹಾಗೂ ಈ ಸುತ್ತೋಲೆ ತಲುಪಿರುವ ಬಗ್ಗೆ ಸ್ವೀಕೃತಿಯನ್ನು ಕೂಡಲೇ ಕಳುಹಿಸುವಂತೆಯೂ ಮತ್ತೊಮ್ಮೆ ಇಲಾಖೆಯ ಅಧೀನಕ್ಕೊಳಪಡುವ ವಿದ್ಯಾಸಂಸ್ಥೆಗಳ ಪ್ರಾಚಾರ್ಯರು ಮತ್ತು ಸಂಸ್ಥೆಯ ಮುಖ್ಯಸ್ಥರುಗಳಿಗೆ ಈ ಮೂಲಕ ತಿಳಿಸಲಾಗಿದೆ.

**ನಿರ್ದೇಶಕರು.**

**ಇವರಿಗೆ,**

ತಾಂತ್ರಿಕ ಶಿಕ್ಷಣ ಇಲಾಖೆಯ ಆಡಳಿತ ವ್ಯಾಪ್ತಿಗೊಳಪಡುವ ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ ಪ್ರಾಚಾರ್ಯರುಗಳಿಗೆ ಮತ್ತು ರಾಜ್ಯ ತಾಂತ್ರಿಕ ಶಿಕ್ಷಣ ಸಂಪನ್ಮೂಲಗಳು ಮತ್ತು ವಾರ್ತಾ ಕೇಂದ್ರ, ಬೆಂಗಳೂರು, ಸಂಸ್ಥೆಯ ಮುಖ್ಯಸ್ಥರಿಗೆ ಸೂಕ್ತ ಕ್ರಮಕ್ಕಾಗಿ.

**ಪ್ರತಿಗಳು,**

1. ಆಡಳಿತಾಧಿಕಾರಿ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರ ಮಾಹಿತಿಗಾಗಿ ನಿರ್ದೇಶನಾಲಯಕ್ಕೆ ಸಂಬಂಧಿಸಿದ ವಿವರಗಳನ್ನು ಅನುಬಂಧ-2 ರಲ್ಲಿ ನಿಗಧಿತ ದಿನಾಂಕದೊಳಗೆ ಬಿಯುಡಿ ಉಪವಿಭಾಗಕ್ಕೆ ಕಳುಹಿಸಲು ಸೂಚಿಸಲಾಗಿದೆ.
2. ಉಪ ನಿರ್ದೇಶಕರು (ಯೋಜನೆ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
3. ಸಹಾಯಕ ಆಡಳಿತಾಧಿಕಾರಿ-1 ,2 ಮತ್ತು 3, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
4. ಸಂಯೋಜಕರು, ಇ-ಆಡಳಿತ ವಿಭಾಗ, ನಿರ್ದೇಶನಾಲಯ ಇವರಿಗೆ ಇಲಾಖೆಯ ವೆಬ್ ಸೈಟ್ ನಲ್ಲಿ ಅಳವಡಿಸಲು ತಿಳಿಸಲಾಗಿದೆ.
5. ನಿರ್ದೇಶನಾಲಯದ ನಗದು ಶಾಖೆ, ಡಿವಿಪಿ(1) ಉಪಭಾಗಕ್ಕೆ ಸೂಕ್ತ ಕ್ರಮಕ್ಕಾಗಿ.

ಅನುಬಂಧ-2

# 2014-15ನೇ ವರ್ಷಕ್ಕಾಗಿ ಸಿಬ್ಬಂದಿಗಳ [ಖಾಯಂ ಅಥವ ತಾತ್ಕಾಲಿಕ] ನಿಗದಿತ ಭತ್ಯೆಗಳು ಇತ್ಯಾದಿಗಳ ವೇತನಕ್ಕಾಗಿ ಉದ್ದೇಶಿಸಲಾದ ಏರ್ಪಾಡುಗಳ ವಿವರ ಹೇಳಿಕೆ [ಯೋಜನೇತರ / ಯೋಜನೆ]

ಸಂಸ್ಥೆಯ ಹೆಸರು:

ಲೆಕ್ಕ ಶೀರ್ಷಿಕೆ:2203-00-0-

| ಕ್ರ ಸಂ | ಪದಧಾರಿಯ ಹೆಸರು | ಲಿಂಗ ಪುರುಷ / ಸ್ತ್ರೀ | ಪದನಾಮ | ಅಂದಾಜುಗಳ ಪುಟ್ಟ ಉಲ್ಲೇಖ | ಹುದ್ದೆಯ ಮಂಜೂರಾದ ವೇತನ | | ವೇತನಬಂಧದಲ್ಲಿರುವಂತೆ ವೇತನ (ಏಐಸಿಟಿಇ ವೇತನ ಶ್ರೇಣಿಯವರಿಗೆ ಮಾತ್ರ) | ವೃತ್ತಿಕ ಗ್ರೇಡ್ ವೇತನ (ಏಐಸಿಟಿಇ ವೇತನ ಶ್ರೇಣಿಯವರಿಗೆ ಮಾತ್ರ) | 1-3-2014 ರಂದು ಇರುವ ಸರ್ಕಾರಿ ನೌಕರರ ಮಾಸಿಕ ವೇತನ (ಏಐಸಿಟಿಇ ಅಥವ ರಾಜ್ಯ ಶ್ರೇಣಿ) | ಅಂಕಣ 5[ಸಿ]+5[ಡಿ]+5[ಇ] ನಲ್ಲಿರುವ ದರದಂತೆ ವರ್ಷಕ್ಕಾಗಿ ಏರ್ಪಾಟು ಮಾಡಿದ ಮೊತ್ತ | ವರ್ಷದೊಳಗೆ ಬರಬೇಕಾದ/ ಬರಬೇಕಾಗಿರುವ ವೇತನ ಬಡ್ತಿ | | | ವರ್ಷಕ್ಕಾಗಿ ಒದಗಿಸಲಾದ ಒಟ್ಟು ಮೊತ್ತ ಅಂದರೆ ಅಂಕಣ 6 ಮತ್ತು 7[ಸಿ] ಸೇರಿ ಒಟ್ಟು ಮೊತ್ತ | ಪ್ರಯಾಣವೆಚ್ಚ ಖಾಯಂ ಮೋಟಾರ್ ಪ್ರಯಾಣ ಭತ್ಯೆ ಮತ್ತು ಸಾರಿಗೆ ಸೌಲಭ್ಯ ಭತ್ಯೆ | ತುಟ್ಟಿ ಭತ್ಯೆ | ನಗರ ಪರಿಹಾರ ಭತ್ಯೆ | ಮನೆ ಬಾಡಿಗೆ ಭತ್ಯೆ | ಪ್ರಗ್ಯಲೇಶನ್ ಮತ್ತು ಯುಎ, ನಿರಣ ಭತ್ಯೆ, ಯೋಜನಾ ಭತ್ಯೆ, ವೃತ್ತಿಕೀಯ ಭತ್ಯೆ, ಬಟ್ಟೆ ಭತ್ಯೆ, ಮದ್ದೇಶರಣ ಭತ್ಯೆ, ಇತ್ಯಾದಿಗಳಿಂದ ಇತರ ನಿಗದಿತ ಭತ್ಯೆ |
|---|---|---|---|---|---|---|---|---|---|---|---|---|---|---|---|---|---|---|---|
| | | | | | ಕನಿಷ್ಟ | ಗರಿಷ್ಟ | | | | | ವೇತನ ಬಡ್ತಿಯ ದಿನಾಂಕ | ವೇತನ ಬಡ್ತಿಯ ದರ | ವರ್ಷಕ್ಕಾಗಿ ವೇತನ ಬಡ್ತಿಯ ಮೊತ್ತ | | | | | | |
| 1 | 2 | 2ಎ | 3 | 4 | 5ಎ | 5ಬಿ | 5ಸಿ | 5ಡಿ | 5ಇ | 6 | 7ಎ | 7ಬಿ | 7ಸಿ | 8 | 9 | 10 | 11 | 12 | 13 |
| 1 | | | | | | | | | | | | | | | | | | | |
| 2 | | | | | | | | | | | | | | | | | | | |
| ಒಟ್ಟು | | | | | | | | | | | | | | | | | | | |

| ಹುದ್ದೆಗಳ ವಿವರ | |
|---|---|
| ಪುರುಷರು | |
| ಮಹಿಳೆಯರು | |
| ಖಾಲಿ | |
| ಒಟ್ಟು | |

ಅಂದಾಜು ಮಾಡುವ ಅಧಿಕಾರಿ ಸಹಿ ಮತ್ತು ಪದನಾಮ

**ದಿನಾಂಕ 1-4-14 ರಿಂದ 31-3-15 ರ ಅವಧಿಯಲ್ಲಿ ನಿವೃತ್ತಾಲಾಗಲಿರುವ ಅಧಿಕಾರಿ / ಸಿಬ್ಬಂದಿ ಗಳ ವಿವರ**

| ಕ್ರ.ಸಂ | ನಿವೃತ್ತಾಲಾಗಲಿರುವ ಅಧಿಕಾರಿ / ಸಿಬ್ಬಂದಿ ಯವರ ಹೆಸರು | ನಿವೃತ್ತಿಯಾಗುತ್ತಿರುವ ದಿನಾಂಕ | ಮೂಲ ವೇತನ | ಹಕ್ಕಿನಲ್ಲಿರುವ ಗಳಿಕೆ ರಜೆ | ಷರಾ |
|---|---|---|---|---|---|
| 1 | | | | | |
| 2 | | | | | |

ಪ್ರಿನ್ಸಿಪಾಲರು